**ಪತ್ರಿಕಾ ಪ್ರಕಟಣೆ**

**ವಿಜಯಪುರ**

**ದಿನಾಂಕ: 08.08.2021.**

**1] ಬಬಲೇಶ್ವರ ಪೊಲೀಸ ಠಾಣೆ ಗುನ್ನೆ ನಂ: 108/2021 ಕಲಂ: 283, 279, 304(ಎ)ಐಪಿಸಿ & 187 ಎಮ್.ವಿ. ಆ್ಯಕ್ಟ್**

ದಿನಾಂಕ: 06.08.2021 ರಂದು 20.10 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1] ಕ್ಯಾಂಟರ ನಂ. ಕೆಎ:28 ಸಿ:5066 ನೇದ್ದರ ಚಾಲಕ ಹೆಸರು ವಿಳಾಸ ನಮೂದು ಇರುವದಿಲ್ಲ. 2] ಮೃತ ವಿಶ್ವನಾಥ ಗಿರಮಲ್ಲಪ್ಪ ಖಾಸಬಾಗ ವಯಾ: 50 ವರ್ಷ ಸಾ: ಅಥರ್ಗಾ ತಾ: ಇಂಡಿ. ಹಾಲಿ ವಸ್ತಿ ಇಬ್ರಾಹಿಂಪೂರ ಗೇಟ ಹತ್ತಿರ ವಿಜಯಪೂರ. ಕ್ಯಾಂಟರ ವಾಹನ ನೇದ್ದರ ಚಾಲಕನು ಸದರಿ ವಾಹನಕ್ಕೆ ಇಂಡಿಕೆಟರ ಲೈಟಗಳನ್ನು ಹಾಕದೇ ಮತ್ತು ಯಾವದೇ ರಿಫ್ಲೆಕ್ಟರಗಳು ಇರದೆ ಹಾಗೂ ಯಾವದೇ ಮುಂಜಾಗ್ರತಾ ಸೂಚನಾ ಫಲಕಗಳನ್ನು ಹಾಕದೇ ರಾತ್ರಿ ವೇಳೆಯಲ್ಲಿ ಸಾರ್ವಜನಿಕ ಸಂಚಾರಕ್ಕೆ ಅಡತಡೆಯಾಗಿ ಮಾನವೀಯ ಜೀವಕ್ಕೆ ಅಪಾಯವಾಗುವ ಸಂಭವ ಇರುತ್ತದೆ ಅಂಬುವದನ್ನು ನಿರ್ಲಕ್ಷವಹಿಸಿ ರಸ್ತೆಗೆ ಅಡೆತಡೆಯಾಗಿ ತನ್ನ ವಾಹನವನ್ನು ನಿಲ್ಲಿಸಿದ್ದು ಇದರಲ್ಲಿಯ ಪಿರ್ಯಾದಿಯ ಗಂಡ ಮೃತ ವಿಶ್ವನಾಥ ಖಾಸಬಾಗ ಇತನು ಮೊಟರ ಸೈಕಲ್ ನಂ. ಕೆಎ–28 ಇಎಫ್.3919 ನೇದ್ದನ್ನು ಬಬಲೇಶ್ವರದ ಕಡೆಯಿಂದ ವಿಜಯಪುರದ ಕಡೆಗೆ ಅತೀ ವೇಗ ಮತ್ತು ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಬಂದು ತನ್ನ ಮುಂದೆ ನಿಂತ ಕ್ಯಾಂಟರ ವಾಹನಕ್ಕೆ ಮೊಟರ ಸೈಕಲವನ್ನು ಹಾಯಿಸಿ ಅಪಘಾತ ಹೊಂದಿ ತಲೆಗೆ, ಮುಖಕ್ಕೆ, ಭಾರಿ ಗಾಯ ಪೆಟ್ಟು ಹೊಂದಿ ಚಿಕಿತ್ಸೆ ಫಲಿಸದೇ ತಿರಿಕೊಂಡಿದ್ದು ಈ ಬಗ್ಗೆ ಕಾನೂನು ಕ್ರಮ ಕೈಕೊಳ್ಳುವ ಕುರಿತು ವಗೈರೆ ಪಿರ್ಯಾದಿಯಲ್ಲಿ ನಮೂದು ಅದೆ. ಈ ಬಗ್ಗೆ ಅನ್ನಪೂರ್ಣಾ ವಿಶ್ವನಾಥ ಖಾಸಬಾಗ ಸಾ: ಅಥರ್ಗಾ ತಾ: ಇಂಡಿ. ಹಾಲಿ ವಸ್ತಿ ಇಬ್ರಾಹಿಂಪೂರ ಗೇಟ ಹತ್ತಿರ ವಿಜಯಪೂರ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 07.08.2021 ರಂದು ಬಬಲೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ತಿಕೋಟಾ ಪೊಲೀಸ ಠಾಣೆ ಗುನ್ನಾ. ನಂ: 119/2021 ಕಲಂ: 188,269 & 78(3) ಕೆಪಿ ಆ್ಯಕ್ಟ್**

ದಿನಾಂಕ **07**.08.2021 ರಂದು 17:10 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಆಸ್ಪಾಕ ಮೀರಾಸಾಬ ನದಾಪ್ ಸಾ। ಕನಮಡಿ ಈತನು ಈಗ ಕೋರೊನಾ ಕೊವಿಡ–19 ರೋಗದ ಹರಡುವಿಕೆ ನಿಯಂತ್ರಿಸುವ ಸಲುವಾಗಿ ಸರ್ಕಾರವು ವೀಕೆಂಡ್ ಲಾಕ್‌ಡೌನ ವಿಧಿಸಿರುವ ನಿಯಮಾವಳಿಗಳನ್ನು ಉಲ್ಲಂಘಿಸಿ ಸಾಂಕ್ರಾಮಿಕ ರೋಗವು ಹರಡದಂತೆ ಕೈಕೊಂಡ ಕ್ರಮಗಳ ವಿರುದ್ದವಾಗಿ ಸಾರ್ವಜನಿಕ ಪ್ರಾಣಕ್ಕೆ ಉದ್ದೇಶಪೂರ್ವಕವಾಗಿ ಸೋಂಕನ್ನು ಹರಡುವ ಸಂಭವ ಇದೆ ಎಂದು ಗೊತ್ತಿದ್ದರೂ ಕೂಡಾ ಸದರಿ ಆರೋಪಿ ಉದ್ದೇಶ ಪೂರ್ವಕವಾಗಿ ಒಂದು ಕಡೆ ಜನರಿಗೆ ಗುಂಪು ಗುಡಿಸಿ ಸಾಂಕ್ರಾಮಿಕ ರೋಗ ಹರಡಲು ಕಾರಣಿಭೂತರಾಗಿ ಸಾರ್ವಜನಿಕರ ಜೀವಕ್ಕೆ ರೋಗ ಹರಡುವ ಸಾದ್ಯತೆ ಇದ್ದದ್ದು ಗೊತ್ತಿದ್ದರೂ ಕೂಡಾ ಸರಕಾರದಿಂದಾಗಲಿ ವ ಸಂಭಂದಪಟ್ಟ ಯಾವುದೇ ಪ್ರಾಧಿಕಾರದಿಂದ ಪರವಾನಿಗೆ ವ ಪರ್ಮಿಟ್ ಇಲ್ಲದೇ ಅನಧಿಕೃತವಾಗಿ ತನ್ನ ಸ್ವಂತ ಲಾಭಕ್ಕಾಗಿ ತನ್ನ ಫಾಯಿದೆಗೊಸ್ಕರ ಅಂಕಿ ಸಂಖ್ಯೆಗಳ ಮೇಲೆ 1 ರೂಪಾಯಿಗೆ 80 ರೂಪಾಯಿ ಕೊಡುವ ಕರಾರಿನ ಮೇಲೆ ಅಂಕಿ ಸಂಖ್ಯೆಗಳ ಆಧಾರದ ಮೇಲೆ ಸಾರ್ವಜನಿಕ ಸ್ಥಳದಲ್ಲಿ ಕೂತು ಕಲ್ಯಾಣ ಮಟಕಾ ಎಂಬ ಓ.ಸಿ. ಮಟಕಾ ಜೂಜಾಟ ನಡೆಸುವಾಗ ಸಿಕ್ಕಿದ್ದು, ಈ ಬಗ್ಗೆ ಸ:ತ: ಅನೀತಾ ರಾಠೋಡ ಮ.ಪಿ.ಎಸ್.ಐ. ತಿಕೋಟಾ ಪೊಲೀಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 07.08,2021 ರಂದು ತಿಕೋಟಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಗಾಂಧಿಚೌಕ ಪೊಲೀಸ ಠಾಣೆ ಗುನ್ನಾ ನಂ: 162/2021 ಕಲಂ: 78(3) ಕೆಪಿ ಆ್ಯಕ್ಟ್**

ದಿನಾಂಕ 06.08.2021 ರಂದು 16.00 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1] ಆನಂದ ಸಿದ್ರಾಮಪ್ಪಾ ಮೋರಕರ ಸಾ॥ ಇಂಡಿರೋಡ ಧನಲಕ್ಷ್ಮಿ ನಗರ ವಿಜಯಪುರ, 2] ನಬಿಲಾಲ ತಂದೆ ಅಮೀನಸಾಬ ತೋನಶ್ಯಾಳ ವಯಾ; 65 ವರ್ಷ ಸಾ॥ ಇಬ್ರಾಹಿಮ್ ರೋಜಾ ಹತ್ತಿರ ವಿಜಯಪುರ. ಇವರು ತಮ್ಮ ತಮ್ಮ ಪಾಯ್ದೆಗೋಸ್ಕರ್ ವಿಜಯಪುರ ಶಹರದ ಜೋರಾಪೂರ ಪೇಟ ಶಂಕರಲಿಂಗ್ ಗುಡಿ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ನಿಂತು 1 ರೂಗೆ 80 ರೂ ಕೊಡುವ ಕರಾರಿನ ಮೇಲೆ ಅಂಕಿ ಸಂಖ್ಯೆಗಳ ಸಹಾಯದಿಂದಾ ಜನರಿಂದ ಹಣ ಪಡೆದುಕೊಂಡು ಕಲ್ಯಾಣ ಮಟಕಾ ಅಂಬುವ ಓ.ಸಿ. ಜೂಜಾಟದಲ್ಲಿ ತೊಡಗಿದಾಗ ಸಿಕ್ಕ ಅಪರಾಧ, ಈ ಬಗ್ಗೆ ಸ:ತ: ಶ್ರೀ ಶರಣಗೌಡ ಬಿ ಗೌಡರ ಪಿ.ಎಸ್.ಐ. [ಕಾ&ಸು] ಗಾಂಧಿ ಚೌಕ ಪಿ.ಎಸ್.ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 07.08.2021 ರಂದು ಗಾಂಧಿಚೌಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ಗೋಲಗುಮ್ಮಜ ಪೊಲೀಸ ಠಾಣೆ ಗುನ್ನಾ. ನಂ: 103/2021 ಕಲಂ: 78(3) ಕೆ ಪಿ ಆ್ಯಕ್ಟ್.**

ದಿನಾಂಕ 06.08.2021 ರಂದು 15.55 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ 1] ಇಸ್ಮಾಯಿಲ್ ಮೊಹ್ಮದಗೌಸ್ ಹವಾಲ್ದಾರ, ಸಾ: ನಿಸಾರಮಡ್ಡಿ, ವಿಜಯಪುರ ಈತನು ಜಯಪುರ ಶಹರದ ಕಣಕಿ ಬಜಾರ ಹತ್ತಿರ ರಸ್ತೆಯ ಮೇಲೆ ಸಾರ್ವಜನಿಕ ಸ್ಥಳದಲ್ಲಿ ಕೆಲವು ಜನರು ಅಂಕಿ ಸಂಖ್ಯೆಗಳ ಆಧಾರದ ಮೇಲೆ ಓ.ಸಿ ಅಂಬುವ ಮಟಕಾ ಜೂಜಾಟವನ್ನು ಆಡುತ್ತಿರುವಾಗ ಸಿಕ್ಕ ಅಪರಾಧ. ಜಪ್ತಾದ ಮಾಲು: ರೋಖ ಹಣ–590=00 ರೂಗಳು, ಓ.ಸಿ ನಂಬರ ಬರೆದ ಚೀಟಿ ಒಂದು ಹಾಗೂ ಒಂದು ಬಾಲ್ ಪೆನ್ ಈ ಬಗ್ಗೆ ಸ:ತ: ರಾಜೇಶ ಎಸ್ ಲಮಾಣಿ ಪಿಎಸ್ಐ (ಕಾ&ಸು) ಗೋಲಗುಮ್ಮಜ್ ಪೊಲೀಸ್ ಠಾಣೆ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 07.08,2021 ರಂದು ಗೋಲಗುಮ್ಮಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**5] ಇಂಡಿ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 141/2021 ಕಲಂ: 78(3) ಕೆ ಪಿ ಆ್ಯಕ್ಟ್. & 420 ಐಪಿಸಿ**

ದಿನಾಂಕ 07.08.2021 ರಂದು 14:00 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1] ದಾದಪ್ಪ @ ಅಮೋಘಿ ಬಸಪ್ಪ ಅಳ್ಳಗಿ ಸಾ:ಬುಂಯ್ಯಾರ ಹಾ ವ ಹಿರೇಬೇನೂರ 2] ಅಮೋಘಿ ಭೀಮಶಿ ಹೆಳವರ ಸಾ; ಹಿರೇಬೇನೂರ [ಫರಾರಿ] ಇವರು ಸಾರ್ವಜನಕರಿಗೆ ಮೋಸ ಮಾಡುವ ಉದ್ದೇಶದಿಂದ ತಮ್ಮ ತಮ್ಮ ಫಾಯ್ದೆಗೋಸ್ಕರ ಸಾರ್ವನಿಕರ ಕಡೆಯಿಂದ 1 ರೂಪಾಯಿಗೆ 80 ರೂ ಕೊಡುವ ಕರಾರಿನ ಮೇಲೆ ಕಲ್ಯಾಣಿ ಓಸಿ ಮಟಕಾ ಜೂಜಾಟ ಬರೆದುಕೊಳ್ಳುತ್ತಿರುವಾಗ ಸಿಕ್ಕ ಅಪರಾಧ. ಜಪ್ತಾದ ಮಾಲು: ರೋಖ ಹಣ 47040 ರೂಗಳು, ಓಸಿ ಅಂಕಿ ಸಂಖ್ಯೆ ಬರೆದ ಚೀಟಿ ಒಂದು , ಒಂದು ಪೆನ್ನು ಸಮೇತ ಸಿಕ್ಕಿದ್ದು. ಈ ಬಗ್ಗೆ ಸ:ತ: ಸ:ತ: ಶ್ರೀ: ಐ ಎಂ ದುಂಡಸಿ ಪಿಎಸ್ಐ ಇಂಡಿ ಗ್ರಾಮೀಣ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 07.08,2021 ರಂದು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.